ಕೋಟಿ ನರಕೋಶಗಳಿವೆಯಂತೆ. ಈ ನರಕೋಶಗಳು ತಮ್ಮೊಳಗೆ ಒಂದು ಸಂಪರ್ಕ ಜಾಲವನ್ನು ನಿರ್ಮಿಸಿಕೊಂಡಿವೆ. ಈ ಸಂಪರ್ಕ ಜಾಲದ ಸಂಖ್ಯೆಯನ್ನು ಕೇಳಿದರೆ ಹೌಹಾರಬೇಕು ಅಷ್ಟಿದೆ. ಎರಡು ಕೋಟಿ ಕೋಟಿಯಂತೆ!! ಹೀಗಂದರೆ ತಕ್ಷಣ ಅದರ ವ್ಯಾಪಕತೆ ಅಂದಾಜಾಗುವುದಿಲ್ಲ ಬಿಡಿ. ಅಂಕಿಯಲ್ಲಿ ನೋಡಿಕೊಳ್ಳಿ 20,00,00,00,00,00,000. ಈಗ ಇದರ ಬೃಹತ್ ಗಾತ್ರ ಒಂದಿಷ್ಟು ಲೆಕ್ಕಕ್ಕೆ ಸಿಕ್ಕಂತಾಯಿತಲ್ಲವೇ. ಈ ಸಂಗ್ರಹ ಸಾಮರ್ಥ್ಯದ ಮುಂದೆ ಎಲ್ಲಾ **GB, TB Memory**ಗಳನ್ನು ನಿವಾಳಿಸಿ ಒಗೆಯಬೇಕು. ಈ ಸಂಗ್ರಹ ಸಾಮರ್ಥ್ಯವೇನೋ ಸಾಕಷ್ಟಿದೆ. ನಮ್ಮ ಪ್ರತಿ ಅನುಭವದ ಸಂಗತಿಗಳು ಒಂದು ಹೊಸ ಸಂಪರ್ಕ ಜಾಲವನ್ನು ನಿರ್ಮಿಸಿಕೊಂಡು ಅವು ಕೆಲವು ಸೆಕೆಂಡಿನಿಂದ ಹಿಡಿದು ಹಲವು ವರ್ಷಗಳ ತನಕ ಸಕ್ರಿಯವಾಗಿರುತ್ತವೆ. ಆಯಾ ಅನುಭವಕ್ಕೆ ಸಂಬಂಧಿಸಿದ ಸಂಪರ್ಕ ಜಾಲವನ್ನು ಆಯಾ ಅನುಭವ ಅಥವಾ ಸಂಗತಿಯ ನೆನಪು ಎಂದು ಕರೆಯಲಾಗುತ್ತದೆ. ನಾವು ನಮ್ಮ ಅನುಭವಗಳ ರಾಶಿಯಲ್ಲಿರುವ ಸ್ಮೃತಿಯನ್ನು ಪುನಃ ನೆನಪಿಗೆ ತರಬೇಕೆಂದರೆ ಆ ಸ್ಮೃತಿಗೆ ಸಂಬಂಧಿಸಿದ ಸಂಪರ್ಕ ಜಾಲ ಉದ್ದೀಪನಗೊಂಡು ನಮ್ಮ ಗ್ರಹಿಕೆಗೆ ಬರುತ್ತದೆ ಎಂದು ಡಾ. ಕಿರಣ ವಿ.ಎಸ್. ಅವರು ಹೇಳುತ್ತಾರೆ. ಕಳೆದೊಂದು ದಶಕದಿಂದೀಚೆಗೆ ನಡೆದ ಸಂಶೋಧನೆಗಳ ಪ್ರಕಾರ ಡಾಕ್ಟರು ಈ ಮಾತನ್ನು ಆಡುತ್ತಾರೆ. ಅಂದರೆ, ನಮ್ಮ ನೆನಪುಗಳು ನಮ್ಮಿಂದ ಅನವಶ್ಯಕವಾಗಿ ಮಾಯವಾಗುವುದಿಲ್ಲ, ಬದಲಿಗೆ, ಸಂಬಂಧಿಸಿದ ಸಂಪರ್ಕ ಜಾಲ ಸಂದರ್ಭಕ್ಕನುಸಾರವಾಗಿ ಉದ್ದೀಪನಗೊಳ್ಳದೇ ಇರುವುದರಿಂದ ಅವು ನಮ್ಮ ನೆನಪಿಗೆ ಬರುವುದಿಲ್ಲ ಅನ್ನುತ್ತಾರೆ. ಎಲ್ಲವೂ ತಲೆಯಲ್ಲಿಯೇ ಇದ್ದರೂ ನೆನಪಿಗೆ ಮಾತ್ರ ಬರುವುದಿಲ್ಲ. ಹೀಗಾಗಿಯೇ, 'ಯಾಳೇಕ ಇಲ್ಲದ್ದವು ಎಪ್ಪತ್ತು ಇದ್ದರೂನು ಒಂದೂ ಪ್ರಯೋಜನಕ್ಕೆ ಬರುವುದಿಲ್ಲ' ಅನ್ನುವಂಗ ಆಗುತ್ತದೆ.



ಅದಕ್ಕಾಗಿ ನಾನು ನೋಟ್ ಮಾಡುವ ಕ್ರಮವೇ ಬೆಸ್ಟ್ ಅಂತ ಅದನ್ನೆ ಮಾಡುತ್ತಿದ್ದೆ. ಆದರೆ, ಈ ಚೀಟಿ, ಚಿಪ್ಪಾಟಿಗಳಲ್ಲಿ ನಮೂದಿಸಿಕೊಂಡಿದ್ದ ಕೆಲವು ಭ್ರೂಣಗಳನ್ನು ನನ್ನವಳು ತನ್ನ ಕೈಯಾರೆ ಹತ್ಯೆ ಮಾಡುತ್ತಿದ್ದಳು. ಬಟ್ಟೆ ತೊಳೆಯಲು ನನ್ನ ಶರ್ಟು–ಪ್ಯಾಂಟು ತಗೊಂಡು ಜೇಬುಗಳನ್ನು ಪರಿಶೀಲಿಸುವಾಗ ಸಿಗುವ ರೊಕ್ಕರುಪಾಯಿಗಳನ್ನು ತೆಗೆದಿಡುತ್ತಿದ್ದಳು. ಆದರೆ, ಅದರಲ್ಲಿ ಭ್ರೂಣಾವಸ್ಥೆಯಲ್ಲಿರುವ ಮಹಾನ್ ಕೃತಿಗಳ ಹೊಳಹು ರೂಪದ ಕಾಗದ ತುಣುಕುಗಳನ್ನು ಕಂಡರೆ ಬೆಕ್ಕು ಹಾಲನ್ನು, ಇಲಿಯನ್ನು ಕಂಡಂತೆ ಮಾಡುತ್ತಿದ್ದಳು. ಒಂದಿಷ್ಟೂ ದಯಾಪರತೆ ಇಲ್ಲದೇ ಪರಪರ... ಹರಿದು ಹಾಕಿಬಿಡುತ್ತಿದ್ದಳು. ಅಂದರೆ, ಅವಳು ಗೊತ್ತಿಲ್ಲದೇ ಹಾಗೆ ಮಾಡುತ್ತಿದ್ದಳು ಎಂದಲ್ಲ. ಬೇಕೆಂದೇ ಮಾಡುತ್ತಿದ್ದಳು! ಕಾರಣವಿಷ್ಟೇ. ಭ್ರೂಣರೂಪಿ ಕೃತಿಗಳನ್ನು ಬೆಳೆಸಲೋಸುಗ ನಾನು ರಾತ್ರಿ ತುಂಬಾ ಹೊತ್ತಿನ ತನಕ ದೀಪ ಉರಿಸುತ್ತ ಕುಳಿತುಕೊಳ್ಳುವುದು ಆಕೆಗೆ ನಿದ್ರಾಭಂಗವಾಗುತ್ತಿತ್ತು. ಆಕೆ, 'ಲೈಟ್ ಆರಿಸಿ ಮಲಗ್ರಿ...' ಅಂತ ಎಷ್ಟೇ ಎಚ್ಚರಿಕೆ ಕೊಡುತ್ತಿದ್ದರೂ ಭ್ರೂಣಕ್ಕೆ ರೆಕ್ಕೆ ಪುಕ್ಕ ಜೋಡಿಸುತ್ತಿದ್ದ ನಾನು ಆಕೆಯ ಮಾತನ್ನು ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ. ಅದಕ್ಕಾಗಿ ಅವಳು, 'ಈ ಭ್ರೂಣ ಇದ್ದರಲ್ಲವೇ ನೀವು ರಾತ್ರಿ ಎದ್ದು ಕೂಡ್ರುವುದು!?...' ಎಂದು ನಿರ್ದಾಕ್ಷಿಣ್ಯವಾಗಿ ನನ್ನ ಭ್ರೂಣಗಳನ್ನು ಹತ್ಯೆ ಮಾಡುತ್ತಿದ್ದಳು.

ನನ್ನ ಈ ಭ್ರೂಣಗಳನ್ನು ಉಳಿಕೊಳ್ಳಲು ನಾನೂ ಒಂದು ಉಪಾಯ ಮಾಡಿ ನನ್ನವಳಿಗೆ ಹೇಳಿದೆ. 'ನೋಡು, ನಾನು ಬರೆದಿಡುವ ಚೀಟಿಗಳಲ್ಲಿ ಒಂದು ಮಹತ್ವದ ಕೃತಿಯಾಗುವ ಮೂಲ ಬೀಜವಿರುತ್ತದೆ. ಯಾವ ಚೀಟಿಯಲ್ಲಿ ಎಂಥ ಮಹಾನ್ ಬೀಜವಿರುತ್ತದೆ ಎಂದು ನಿನಗೂ ಗೊತ್ತಿಲ್ಲ, ನನಗೂ ಸಹ ಗೊತ್ತಾಗುವುದಿಲ್ಲ. ನೀನು ಈ ರೀತಿ ಚೀಟಿಗಳನ್ನು ಹರಿದು ಹಾಕಿದರೆ ಹುಟ್ಟುವ